

ಸಾತೊಡ್ಡಿ ಜಲಪಾತ

(6ನೇ ಪುಟದಿಂದ)

ಸೆಳವಿಗೆ ಸಿಕ್ಕು ಸಂಭವಿಸಿದ ಸಾವು ಅಸಂಖ್ಯ. ಈ ಫಾಲ್ಸ್‌ಗೆ 'ಮರಣಗುಂಡಿ'ಯೆಂಬ ಅನ್ವರ್ಥನಾಮ ಕೂಡ ಇದೆ. ಜಾರುವಿಕೆ, ರಕ್ತ ಹೀರುವ ಉಂಬಳಗಳು ಜಲಪಾತದ ತಳಕ್ಕೆ ಹೋಗುವಲ್ಲಿ ಅಡ್ಡಿಯನ್ನು ಉಂಟು ಮಾಡಲಿವೆ. ಅರಣ್ಯ ಇಲಾಖೆ ಶಿವಗಂಗಾ ಫಾಲ್ಸ್‌ಗೆ ಇಳಿಯಲು ಮೆಟ್ಟಿಲುಗಳನ್ನು ನಿರ್ಮಿಸಿ, ವೀಕ್ಷಣಾ ಗೋಪುರವನ್ನು ಕಟ್ಟಿದೆ.

(ಮಾರ್ಗ: ಶಿರಸಿ- ಹುಲೇಕಲ್- ವಾನಳ್ಳಿ- ಜಡ್ಡಿಗದ್ದೆ ಮಾರ್ಗದಲ್ಲಿ 40 ಕಿ.ಮೀ. ಬಂದರೆ ಸುಲಭ ದಾರಿಯಿದ್ದು, 4 ಕಿ.ಮೀ.ನಷ್ಟು ದೂರ ಮಾತ್ರ ಕಡಿಮಾರ್ಗದಲ್ಲಿ ಸಾಗಬೇಕಿದೆ. ಯಲ್ಲಾಪುರ-ಹುಲೇಕಲ್-ವಾನಳ್ಳಿ ಮಾರ್ಗದಿಂದಲೂ ಜಲಪಾತ ಸ್ಥಳಕ್ಕೆ ತೆರಳಬಹುದು.)

**ವೈಯ್ಯಾರಿ ಮಾಗೋಡು**

ಯಲ್ಲಾಪುರ ತಾಲ್ಲೂಕಿನಲ್ಲಿದೆ ಈ ಫಾಲ್ಸ್. ಬೇಡ್ತಿ ನದಿ ಕಾಡಿನ ತಡಿಗಳಲ್ಲಿ 700 ಅಡಿ ಎತ್ತರದಿಂದ ಜಿಗಿದು, ದಬದಬನೆ ಬಿದ್ದು ಮಾಗೋಡು ಜಲಪಾತ ಸೃಷ್ಟಿಸಿದ್ದಾಳೆ. ಮಳೆ ಸುರಿದ ಸಮಯದಲ್ಲಿ ಎಲ್ಲೆಡೆ ಮಂಜಿನ ಮೋಡ ಮುಸುಕಿಕೊಳ್ಳುತ್ತದೆ. ಸುತ್ತಲ ಹಸಿರ ಸಿರಿಯ ಸಾಲಿನ ಮಧ್ಯೆ ದೂರದೂರದಲ್ಲಿ ಅದೃಶ್ಯ ಜಲಪಾತಗಳು ಸೊಬಗ ಸೂಸುತ್ತವೆ. ಮಾಗೋಡ ದಬದಬೆಗೆ ಸಹನಟಿಯರಂತೆ ಬಳಕುತ್ತವೆ.

(ಮಾರ್ಗ: ಯಲ್ಲಾಪುರ-ಅಂಕೋಲಾ ರಾಷ್ಟ್ರೀಯ ಹೆದ್ದಾರಿಯಿಂದ ಮಾಗೋಡ ಕ್ರಾಸ್‌ನಿಂದ 19 ಕಿ.ಮೀ. ಶಿರಸಿಯಿಂದ 57 ಕಿ.ಮೀ. ದೂರದಲ್ಲಿದೆ. ಶಿರಸಿ-ಯಲ್ಲಾಪುರ ಮಾರ್ಗದಲ್ಲಿ ನಂದೊಳ್ಳಿ ಕ್ರಾಸ್‌ನಿಂದ 20 ಕಿ.ಮೀ. ದೂರವಿದೆ. ಅರಣ್ಯ ಇಲಾಖೆ ವಸತಿ ಗೃಹವಿದೆ.)

**ಕಿವುಡಾಗಿಸುವ ಉಂಚಳ್ಳಿ ಫಾಲ್ಸ್**

ಸಿದ್ದಾಪುರ ತಾಲ್ಲೂಕಿನ ಉಂಚಳ್ಳಿ ಫಾಲ್ಸ್ ಸೃಷ್ಟಿಸಿದಾಕೆ ಅಘನಾಶಿನಿ. 400 ಅಡಿ ಕಂದಕಕ್ಕೆ ಹಾಸುಗಲ್ಲುಗಳ ಮೇಲೆ ಬೀಳುತ್ತ ಹಾಲ್ನೊರೆಧಾರೆಗೆ ಮತ್ತೆರಡು ಹೆಸರುಗಳಿವೆ. ನೋಡುಗರನ್ನು ಕಿವುಡಾಗಿಸುವಂಥ ಶಬ್ದ ಮಾಡುವುದರಿಂದ ಕೆಪ್ಪ ಜೋಗ, ಬ್ರಿಟಿಷ್ ಕಲೆಕ್ಟರ್ ಲೂಸಿಂಗ್ಟನ್ ಮೊದಲು ಕಂಡಿದ್ದರಿಂದ ಲೂಸಿಂಗ್ಟನ್ ಫಾಲ್ಸ್ ಎಂದೂ ಕರೆಯಲಾಗುತ್ತದೆ. ಇಲ್ಲಿ ವೀಕ್ಷಣಾಗೋಪುರವಿದ್ದು, ಕೆಳಗಿಳಿಯಲು ಮೆಟ್ಟಿಲುಗಳಿವೆ. ಮಳೆಗಾಲದಲ್ಲಿ ಜಾರುವಿಕೆ, ಉಂಬಳದ ಕಾಟವಿದೆ.

(ಮಾರ್ಗ: ಶಿರಸಿಯಿಂದ 39 ಕಿ.ಮೀ. ದೂರ. ಶಿರಸಿ-ಕುಮಟಾ ರಸ್ತೆಯಲ್ಲಿ ಅಮ್ಮಿನಳ್ಳಿಯಲ್ಲಿ ಎಡಕ್ಕೆ ತಿರುಗಿ, ಹೆಗ್ಗರಣೆ ರಸ್ತೆಯಲ್ಲಿ ಸಾಗಿದರೆ ಫಾಲ್ಸ್‌ಗೆ ತಲುಪಬಹುದು. ಸಿದ್ದಾಪುರ ಕಡೆಯಿಂದ ಸಿದ್ದಾಪುರ-ಶಿರಸಿ ಮಾರ್ಗದಲ್ಲಿ ಹೆಗ್ಗರಣೆ ತಿರುವಿನಲ್ಲಿ ಸಾಗಿ ಬರಬಹುದು).

**ಬ್ರಿಟಿಷ್ ಬಂಗ್ಲೆಯಿಂದ..**

ಶರಾವತಿ ನಿರ್ಮಿತ ಜೋಗ್‌ಫಾಲ್ಸ್ ಶಿವಮೊಗ್ಗಾ ಜಿಲ್ಲೆಯಲ್ಲಿ ಬಂದರೂ, ಉತ್ತರ ಕನ್ನಡದ ಸಿದ್ದಾಪುರ ತಾಲ್ಲೂಕಿನಲ್ಲಿ ಬರುವ ಬ್ರಿಟಿಷ್ ಬಂಗ್ಲೆಯಿಂದ ಕಾಣಸಿಗುವ ದೃಶ್ಯ ನಯನ ಮನೋಹರವೆನಿಸಲಿದೆ. 'ಮುಂಗಾರು ಮಳೆ'ಯಲ್ಲಿ ಚಿತ್ರಿಕರಿಸಲಾದ ಸ್ಥಳವೂ ಈ ಭಾಗದಿಂದಲೇ ವೀಕ್ಷಣೆಗೆ ಸಾಧ್ಯ. ಶರಾವತಿ 252 ಮೀಟರ್ ಎತ್ತರದಿಂದ ಧುಮ್ಮಿಕ್ಕುವ ದೃಶ್ಯ ಇಲ್ಲಿ ಬೇರ್‍ಯಾವುದೋ ಜಲಪಾತದಂತೆ ಭಾಸವಾಗುತ್ತದೆ. ಇನ್ನು ಮಳೆಯ ಅಬ್ಬರ ಜೋರಿದ್ದು, ಲಿಂಗನಮಕ್ಕಿ ಅಣೆಕಟ್ಟಿನಿಂದ ಹೆಚ್ಚಿನ ನೀರು ಬಿಟ್ಟಾಗಲಂತೂ ಜೋಗ್ ಸೌಂದರ್ಯವನ್ನು ಕಾಣಲು ಎರಡು ಕಣ್ಣುಗಳು ಸಾಲದು. ಸಾಮಾನ್ಯವಾಗಿ ಆಗಸ್ಟ್ ತಿಂಗಳಲ್ಲಿ ಲಿಂಗನಮಕ್ಕಿ ಅಣೆಕಟ್ಟಿನಿಂದ ನೀರು ಬಿಡುತ್ತಾರೆ.

(ಮಾರ್ಗ: ಸಿದ್ದಾಪುರದಿಂದ 22ಕಿ.ಮೀ. ಶಿರಸಿಯಿಂದ 55 ಕಿ.ಮೀ. ಶಿವಮೊಗ್ಗಾದಿಂದ 100 ಕಿ.ಮೀ. ಹುಬ್ಬಳ್ಳಿಯಿಂದ 160 ಕಿ.ಮೀ.)

**ಸಾತೊಡ್ಡಿ ಸೌಂದರ್ಯ**

ಯಲ್ಲಾಪುರ ತಾಲ್ಲೂಕಿನ ಸಾತೊಡ್ಡಿ ಜಲಪಾತ ಕರ್ನಾಟಕದ ನಯಾಗಾರ. ಯಲ್ಲಾಪುರದಿಂದ 30 ಕಿ.ಮೀ. ದೂರದಲ್ಲಿರುವ ಫಾಲ್ಸ್ 32 ಮೀಟರ್ ಎತ್ತರದಿಂದ ಎರಡು ಹಂತಗಳಲ್ಲಿ ಧುಮ್ಮಿಕ್ಕಲಿದೆ.

(ಮಾರ್ಗ: ಯಲ್ಲಾಪುರ ಸಾತೊಡ್ಡಿ ಮಾರ್ಗದಲ್ಲಿ 30 ಕಿ.ಮೀ. ದೂರ).

ಶಿರಸಿಯಿಂದ 40ಕಿ.ಮೀ. ದೂರದಲ್ಲಿರುವ ಮತ್ತಿಘಟ್ಟ ಸಮೀಪದ ಹಸೆಹಳ್ಳ ಫಾಲ್ಸ್ ಸಸ್ಯರಾಶಿಯ ನಡುವೆ 65 ಮೀಟರ್ ಎತ್ತರದಿಂದ ಬೀಳುತ್ತದೆ. ಶಿರಸಿ-ಕುಮಟಾ ಮಾರ್ಗದಲ್ಲಿ ಬಲಕ್ಕೆ ಸಿಗುವ ಹೆಗಡೆಕಟ್ಟಾ- ದೇವನಳ್ಳಿ- ಮತ್ತಿಘಟ್ಟ ಮಾರ್ಗದಲ್ಲಿ ಸಾಗಿದರೆ, ಐದು ಕಿ.ಮೀ. ಕಾಲ್ನಡಿಗೆ ಪ್ರಯಾಣವಿದೆ. ಶಿರಸಿ ತಾಲ್ಲೂಕಿನ ಸಾಲ್ಕಣಿ ಸಮೀಪದ ಮುರೇಗಾರ ಜಲಪಾತ 15 ಮೀಟರ್ ಎತ್ತರದಿಂದ ಹರಡಿಕೊಳ್ಳಲಿದೆ. ಶಿರಸಿಯಿಂದ 39 ಕಿ.ಮೀ. ದೂರದಲ್ಲಿರುವ ಗಣೇಶಫಾಲ್ಸ್ 80 ಮೀಟರ್ ಎತ್ತರದಿಂದ ಶೋಭಿಸಲಿದೆ. ಶಿರಸಿ-ಶಿರಸಗಾಂವ್ ಮಾರ್ಗದಲ್ಲಿ ಸಾಗಿದರೆ ಸುಸಬ್ಬಿ ಫಾಲ್ಸ್ ಸಿಗಲಿದೆ. ಶಿರಸಿ- ಕುಮಟಾ ಮಾರ್ಗದಲ್ಲಿ ಹೊಸೂರ ಕ್ರಾಸ್‌ನಿಂದ ಒಳಗೆ ಬೆಣ್ಣೆ ಫಾಲ್ಸ್ ದರ್ಶನವಾಗಲಿದೆ. ಕಾರವಾರದಿಂದ 65 ಕಿ.ಮೀ. ದೂರದಲ್ಲಿ ದೇವಕಾರ ಜಲಪಾತ 64 ಮೀಟರ್ ಎತ್ತರದಿಂದ ಬಿದ್ದರೆ, ಹೊನ್ನಾವರ ತಾಲ್ಲೂಕಿನ ಕಾಸರಕೋಡ ಸಮೀಪದಲ್ಲಿ ಒರತೆ ನೀರು 30 ಅಡಿ ಎತ್ತರದಿಂದ ಧುಮುಕಿ ಅಪ್ಸರಕೊಂಡ ಜಲಧಾರೆಯನ್ನು ಸೃಷ್ಟಿಸಿದೆ. ಘಟ್ಟದ ಮೇಲಿನ ಬುರುಡೆ ಜಲಪಾತ, ಇಳಿಮನೆ, ವಾಟೆಹಳ್ಳ, ಮಲೆಮನೆ, ಲಾಲಗುಳಿ, ಮಾಬಗೆ ಮುಂತಾದ ಜಲಪಾತಗಳು ಜಿಲ್ಲೆಯನ್ನು ಜಲಪಾತಗಳ ತವರನ್ನಾಗಿಸುವಲ್ಲಿ ಪಾಲು ಹೊಂದಿವೆ.